ರಾಜ್ಯದಲ್ಲಿರುವ ಪರಿಶಿಷ್ಟ ಜಾತಿ ಮಂತರ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿನಿಲಯಂಗಳ ಬಗ್ಗೆ

೯೭೨(೧). ಶ್ರೀ ಹೆಚ್. ಕೆ. ಕಂಮಾರಸ್ವಾಮಿ (ಬೇಲೂರು).—ಮಾನ್ಯ ಸವಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯಂವಿಟ್ಟು ಉತ್ತರಿಸುವರೇ?

ಅ) ರಾಜ್ಯದಲ್ಲಿ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದವರ ವಿದ್ಯಾರ್ಥಿ–ವಿದ್ಯಾರ್ಥಿನಿಯಂರಿಗೆ ಇರುವ ಮೆಟ್ರಿಕ್‌ಪೂರ್ವ ಮತ್ತು ಮೆಟ್ರಿಕ್ ನಂತರದ ಸರ್ಕಾರಿ ವಿದ್ಯಾರ್ಥಿನಿಲಯಗಳೆಷ್ಟು ,

ಆ) ರಾಜ್ಯ ಸರ್ಕಾರದ ಆನಂದಾನ ಪಡೆಯುತ್ತಿರುವ ಒಟ್ಟು ಪರಿಶಿಷ್ಟ ಜಾತಿ ಮತ್ತು ವರ್ಗಗಳ ಜಾಸಗಿ ವಿದ್ಯಾರ್ಥಿನಿಲಯಗಳ ಸಂಖ್ಯೆ ಎಷ್ಟು ?

ಇ) ೧೯೮೫–೮೬ನೇ ವರ್ಷದಲ್ಲಿ ರಾಜ್ಯದ ಎಲ್ಲಾ ವಿದ್ಯಾರ್ಥಿನಿಲಯಂಗಳಲ್ಲಿ ಇರುವ ವಿದ್ಯಾರ್ಥಿ ವಿದ್ಯಾರ್ಥಿನಿಯರ ಸಂಖ್ಯೆ ಎಷ್ಟು ?

ಈ) ರಾಜ್ಯದಲ್ಲಿ ಪ್ರತಿಯೊಬ್ಬ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಒಂದನೇ ತರಗತಿಯಿಂದ ಪದವಿ ಮತ್ತು ಸ್ನಾತಕೋತ್ತರ ವ್ಯಾಸಂಗಗಳಲ್ಲಿ ಓದುವ ಎಲ್ಲಾ ಮಂಕ್ಕಳಿಗೆ ಸರ್ಕಾರ ವಿದ್ಯಾರ್ಥಿನಿಲಯಗಳನ್ನು ತೆರೆಯುಂವ ವ್ಯವಸ್ಥೆ ಮಾಡುವುದೇ?

ಉ) ರಾಜ್ಯದಲ್ಲಿ ವಿದ್ಯಾರ್ಥಿನಿಲಯಗಳೆಷ್ಟು ? ಸ್ವಂತ ಕಟ್ಟಡಗಳು ಹೊಂದಿವೆಯೇ,

ಊ) ವಿದ್ಯಾರ್ಥಿನಿಲಯಗಳ ಮಂಕ್ಕಳಿಗೆ ವಿವಿಧ ತರಗತಿಗಳವರಿಗೆ ಕೊಡುವ ತಿಂಗಳ ಭತ್ಯವೆಷ್ಟು, ಇದನ್ನು ಬೆಲೆ ಏರಿಕೆಗಳಿಗನುಗುಣವಾಗಿ ಹೆಚ್ಚಿಸುವ ಯೋಜನೆಯೇನಾದರೂ ಸರ್ಕಾರಕ್ಕೆ ಇದೆಯೇ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧. ೬೧೬ ಮೆಟ್ರಿಕ್‌ಪೂರ್ವ ೧. ವಿದ್ಯಾರ್ಥಿಗಳಿಗೆ ೪೧೫
೨. ವಿದ್ಯಾರ್ಥಿನಿಯರಿಗೆ ೨೦೧

೨. ೭೨ ಮೆಟ್ರಿಕ್ ನಂತರ ೧. ವಿದ್ಯಾರ್ಥಿಗಳಿಗೆ ೭೦
೨. ವಿದ್ಯಾರ್ಥಿನಿಯರಿಗೆ. ೨

ಆ) ೨೨೨ ಪರಿಶಿಷ್ಟ ಜಾತಿ ೨೧೩ ಪರಿಶಿಷ್ಟ ವರ್ಗ ೯

ಇ) ಒಟ್ಟು ೬೦,೦೩೩ (ಬಾಲಕರು) ೪೯,೮೦೨ (ಬಾಲಕಿಯರು) ೧೦,೨೩೧

ಈ) ವಿದ್ಯಾರ್ಥಿನಿಲಯದ ಅವಶ್ಯಕತೆ ಇದ್ದ ಮಂಕ್ಕಳಿಗೆ ಮಾತ್ರ :

೧. ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗೆ ಓದುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗೆ ಕ್ರಮವಾಗಿ ವಸತಿ ಶಾಲೆ ಮತ್ತು ಆಶ್ರಮ ಶಾಲೆಗಳನ್ನು ತೆರೆಯಲಾಗಿದೆ. ೬ ವರ್ಷದೊಳಗಿನ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗಗಳ ಮಕ್ಕಳಿಗಾಗಿ ೭೬೫ ಸರ್ಕಾರಿ ಮಂತರ, ಮಹಿಳಾ ಕೇಂದ್ರಗಳನ್ನು ನಡೆಸಲಾಗುತ್ತಿದೆ.

೨. ೫ನೇ ತರಗತಿಯಿಂದ ೧೦ನೇ ತರಗತಿಯಂವರಿಗೆ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ವರ್ಗದ ಮಕ್ಕಳಿಗಾಗಿ ಮೆಟ್ರಿಕ್ ಪೂರ್ವ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿವೆ.

೩. ಮೆಟ್ರಿಕ್ ನಂತರದಲ್ಲಿ ಓದುವ ಮಕ್ಕಳಿಗೆ ಆವಶ್ಯಕತೆಗೆ ತಕ್ಕಂತೆ ಜಿಲ್ಲಾಧಿಕಾರಿಗಳ ಅಭಿಪ್ರಾಯ ತಿಳಿದು ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ನಡೆಸಲಾಗುತ್ತಿದೆ.

ಉ) ೬೮೮, ಸರ್ಕಾರಿ ವಿದ್ಯಾರ್ಥಿನಿಯಲಗಳಲ್ಲಿ ೧೫೨ ನಿಲಯಂಗಳಿಗೆ ಸ್ವಂತ ಕಟ್ಟಡಗಳು ಇವೆ.

ಊ) ೧. ಮೆಟ್ರಿಕ್ ಪೂರ್ವ ಮಂಕ್ಕಳಿಗೆ ಪ್ರತಿ ತಿಂಗಳಿಗೆ ೧೦೦ ರೂ. ಗಳಂತೆ ಭೋಜನ ವೆಚ್ಚವನ್ನು ಮಂತರ್ತು ಬಾಡಿಗೆ ಬಟ್ಟೆ ಪಠ್ಯ ಪುಸ್ತಕ, ಲೇಖನ ಸಾಮಗ್ರಿ ಮತಿತ್ತರ ಸಾಧಿಲಾತ್ಥರಂ ವೆಚ್ಚವನ್ನು ಭರಿಸಲಾಗುತ್ತಿದೆ.

೨. ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳಲ್ಲಿ ಪ್ರತಿ ವಿದ್ಯಾರ್ಥಿಗೆ ತಿಂಗಳಿಗೆ ೧೫೦ ರೂ. ಗಳಂತೆ ಭೋಜನ ವೆಚ್ಚ ವಸತಿ ಸೌಕರ್ಯ, ಬಾಡಿಗೆ, ನೀರು ವಿದ್ಯುತ್ ಮತ್ತು ಇತರೆ ವೆಚ್ಚವನ್ನು ಭರಿಸಲಾಗುತ್ತಿದೆ.

ಈಗ ಕೊಡುತ್ತಿರುವ ಭೋಜನ ವೆಚ್ಚವನ್ನು ಏರಿಸಲು ಕೆಲವು ಅನಕದಾನಿತ ಸಂಸ್ಥೆಗಳಿಂದ ಬೇಡಿಕೆಗಳು ಬಂದಿವೆ. ಇವುಗಳನ್ನು ಪರಿಶೀಲಿಸಿ ಏರಿಕೆಯ ಬಗ್ಗೆ ಮುಂದಿನ ಕ್ರಮ ಕೈಗೊಳ್ಳಲಾಗುವುದು.

ಅಂಗವಿಕಲರ ವಿಧವೆಯರ ಹಾಗೂ ವೃದ್ಧರ ಮಾಸಿಕ ವೇತನದ ಬಗ್ಗೆ

೧೬೬. ಶ್ರೀ ವೇದಾಂತ ಹೆಮ್ಮಿಗೆ (ಕೃಷ್ಣರಾಜ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ೧೯೮೬ರ ವರೆವಿಗೆ ಸರ್ಕಾರದವರು ರಾಜ್ಯದಲ್ಲಿ ಎಷ್ಟು ಮಂದಿ ಅಂಗವಿಕಲರಿಗೆ ವಿಧವೆಯರಿಗೆ ಹಾಗೂ ವೃದ್ಧರಿಗೆ ಮಾಸಿಕ ವೇತನವನ್ನು ನೀಡುತ್ತಿದ್ದಾರೆ ವಿಧವೆಯರಿಗೆ ಹಾಗೂ ಗರ್ಭಿಣಿಯರಿಗೆ ಭತ್ಯ ಕೊಡುವ ಪದ್ಧತಿ ಯಾವಾಗ ಜಾರಿಗೆ ಬಂದಿತು,

ಆ) ಈ ಮಾಸಿಕ ವೇತನ ನೀಡಲು ಸರ್ಕಾರದವರು ಅನುಸರಿಸುತ್ತಿರುವ ರೀತಿ ನೀತಿಗಳೇನು,

ಇ) ವೃದ್ಧರಲ್ಲದ ಅನೇಕ ಮಂದಿಗೆ ಈ ಮಾಸಾಶನವು ದೊರಕುತ್ತಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಹಾಗೂ ಸರ್ಕಾರದವರು ಇದರ ಬಗ್ಗೆ ಜಿಲ್ಲಾವಾರು ಸಮೀಕ್ಷೆ ನಡೆಸಿ ಅಂತಹವರಿಗೆ ವೇತನ ನಿಲ್ಲಿಸಲು ಕ್ರಮ ಕೈಗೊಳ್ಳುವರೆ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ವೇತನಗಳ ಸಂಖ್ಯೆ

ಅ)	೧.	ವೃದ್ಧಾಪ್ಯ ವೇತನಿಗಳು	೬,೫೪,೫೬೦
	೨.	ಅಂಗವಿಕಲರ ಮಾಸಾಶನಿಗಳು	೨,೭೫,೧೬೮
	೩.	ವಿಧವಾ ಮಾಸಾಶನಿಗಳು	೪,೬೭,೦೮೫

ವಿಧವಾ ಮಾಸಾಶನ ಪದ್ಧತಿ ಹಾಗೂ ಹೆರಿಗೆ ಭತ್ಯ ಪದ್ಧತಿಯು ೧-೪-೧೯೮೪ ರಿಂದ ಜಾರಿಗೆ ಬಂದಿರುತ್ತದೆ.

ಆ) ಸರ್ಕಾರದವರು ಅನುಸರಿಸುತ್ತಿರುವ ರೀತಿನೀತಿಗಳು

೧. ವೃದ್ಧಾಪ್ಯ ವೇತನ :

೧. ವೇತನಿಗೆ ೬೫ ವರ್ಷ ಅಥವಾ ಹೆಚ್ಚಿಗೆ ಆಗಿರಬೇಕು.
೨. ಅವರಿಗೆ ಯಾವುದೇ ವಿಧವಾದ ಆರ್ಥಿಕ ವರಮಾನ ಇರಬಾರದು.
೩. ಅವರು ಕರ್ನಾಟಕ ರಾಜ್ಯದಲ್ಲಿ ೩ ವರ್ಷಗಳ ಕಾಲವಾದರೂ ನೆಲೆಸಿರುವವರಾಗಿಬೇಕು.
೪. ಜೀವಂತ ಅವಧಿಯವರೆಗೆ ವೃದ್ಧಾಪ್ಯ ವೇತನವನ್ನು ಪಾವತಿ ಮಾಡಲಾಗುತ್ತದೆ.

೨. ಅಂಗವಿಕಲರ ಮಾಸಾಶನ :

೧. ಮಾಸಾಶನಿಯು ಅಂಗವಿಕಲನಾಗಿರಬೇಕು.
೨. ಅವರಿಗೆ ಯಾವುದೇ ಆರ್ಥಿಕ ವರಮಾನವಿರಬಾರದು.
೩. ಕುಟುಂಬದ ವಾರ್ಷಿಕ ಆರ್ಥಿಕ ವರಮಾನವು ೩,೬೦೦ರೂ. ಗಳಿಗೆ ಮೀರಿರಬಾರದು.
೪. ಮರಣಿಸುವವರೆಗೆ ಆರ್ಥಿಕ ಸ್ಥಿತಿ ಸುಧಾರಿಸುವವರೆಗೆ ಅಥವಾ ಕರ್ನಾಟಕ ರಾಜ್ಯವನ್ನು ಬಿಡುವವರೆವಿಗೆ ಮಾಸಾಶನವನ್ನು ನೀಡಲಾಗುತ್ತದೆ.